ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 515 (847)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ರೋಜ್‌ಗಾರ್ ಯೋಜನೆಯಲ್ಲಿ 28.6.96ರಂದು ನಡೆದ ಸಂದರ್ಶನಕ್ಕೆ ಬಂದ ಅರ್ಜಿಗಳೆಷ್ಟು?

ಆ) ಅದರಲ್ಲಿ ಆಯ್ಕೆಯಾದವರ ಸಂಖ್ಯೆ ಎಷ್ಟು (ಯುವತಿಯರ ಮತ್ತು ಯುವಕರ ಪ್ರತ್ಯೇಕ ವಿವರ ನೀಡುವುದು)

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):-

ಅ) ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ ಬಂದ ಅರ್ಜಿಗಳು : 400

ಯುವಕರು : 388

ಯುವತಿಯರು : 12

ಆ) ಇದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಒಟ್ಟು: 213

ಯುವಕರು : 211

ಯುವತಿಯರು : 02

ವಿಷಯ:- ರೋಜ್‌ಗಾರ್ ಯೋಜನೆಯಲ್ಲಿ ನಡೆದ ಸಂದರ್ಶನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 516 (846)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ರೋಜ್‌ಗಾರ್ ಯೋಜನೆಯಲ್ಲಿ 22.6.96ರಂದು ನಡೆದ ಸಂದರ್ಶನಕ್ಕೆ ಬಂದ ಅರ್ಜಿಗಳೆಷ್ಟು (ಯುವಕರು ಮತ್ತು ಯುವತಿಯರ ಸಂಖ್ಯೆ ತಿಳಿಸುವುದು)

ಆ) ಇದರಲ್ಲಿ ಆಯ್ಕೆಯಾದವರ ಸಂಖ್ಯೆ ಎಷ್ಟು (ಯುವತಿಯರ ಮತ್ತು ಯುವಕರ ಪ್ರತ್ಯೇಕ ವಿವರ ನೀಡುವುದು)

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):-

ಅ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ ಬಂದ ಅರ್ಜಿಗಳು - 226

ಯುವಕರು - 210

ಯುವತಿಯರು - 16

ಆ) ಇದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳು

ಒಟ್ಟು ಸಂಖ್ಯೆ - 136

ಯುವಕರು - 126

ಯುವತಿಯರು - 10

ವಿಷಯ:- ರಾಜ್ಯದಲ್ಲಿ ಜಂಟಿ ವಲಯದಲ್ಲಿ ವಿಮಾನ ಕಂಪನಿಯ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 518 (1188)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಬೆಂಗಳೂರಿನಲ್ಲಿ ಜಂಟಿ ವಲಯದಲ್ಲಿ ವಿಮಾನ ಕಂಪನಿಯನ್ನು ಪ್ರಾರಂಭಿಸಲು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಪೂರ್ಣ ವಿವರ ನೀಡುವುದು?

ಇ) ಈ ರೀತಿ ವಿಮಾನ ಕಂಪನಿಯನ್ನು ಪ್ರಾರಂಭಿಸಲು ಕೇಂದ್ರದ ಒಪ್ಪಿಗೆಯನ್ನು ಪಡೆಯಲಾಗಿದೆಯೇ?

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) ಕರ್ನಾಟಕ ಸರ್ಕಾರವು ಯಾವುದೇ ವಲಯದಲ್ಲಿ ವಿಮಾನ ಕಂಪನಿಯನ್ನು ಪ್ರಾರಂಭಿಸಲು ಯಾವುದೇ ಪ್ರಸ್ತಾವನೆಯನ್ನು ಹೊಂದಿರುವುದಿಲ್ಲ. ಆದರೆ ಕೆ.ಎಸ್.ಐ.ಐ.ಡಿ.ಸಿ.ಯು ಮುಖ್ಯವಾದಂತಹ ಕೈಗಾರಿಕಾ ಹಾಗೂ ಪ್ರವಾಸಿ ಸ್ಥಳಗಳಿಗೆ ವಾಯು ಸಾರಿಗೆ ಸೇವಾ ಸೌಕರ್ಯವನ್ನು ಒದಗಿಸುವ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಈ ಸಂಬಂಧವಾಗಿ ಹೊಸ ಪ್ರಾದೇಶಿಕ ವಾಯು ಸಾರಿಗೆಯನ್ನು ಜಂಟಿ:ಖಾಸಗಿ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸುವ ಸಾಧ್ಯತೆಯನ್ನು ಪರಿಗಣಿಸಲಾಗುತ್ತಿದೆ. ಮತ್ತು ಈ ಬಗ್ಗೆ ಒಂದು ಪ್ರಸ್ತಾವನೆಯನ್ನು ಕೆ.ಎಸ್.ಐ.ಐ.ಡಿ.ಸಿ.ಯು ಸರ್ಕಾರಕ್ಕೆ ಸಲ್ಲಿಸಿದೆ.

ಆ) ಪ್ರಸ್ತಾವನೆಯು ಇನ್ನೂ ರಾಜ್ಯ ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ.

ಇ) ಇಲ್ಲ. ಮೇಲೆ ಹೇಳಿದ ಪ್ರಸ್ತಾವನೆಗೆ ಅಗತ್ಯವಿದ್ದಲ್ಲಿ ಸೂಕ್ತ ಸಮಯದಲ್ಲಿ